<u>ದಿನಾಂಕಃ 19-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ- ವಾದಿ ಪರ ವಕೀಲರಿಂದಃ-</u>

ನಾನು 2 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಈ ಕೇಸಿನ ಬಗ್ಗೆ ಮಾಹಿತಿ ಇರುತ್ತದೆ. ನಾನು ಭಗರ್ ಹುಕ್ಕುಂ ಬಗ್ಗೆ ಅರ್ಜಿಯನ್ನು ನೀಡಿದ್ದೇನೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ್ದು ಈ ಬಗ್ಗೆ ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಅಂತಹ ಹಿಂಬರಹವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಅರ್ಜಿಯ ಮೇಲೆ ಆರ್.ಐ, ತಹಶೀಲ್ದಾರರು, ವಿ.ಎ ರವರು ಸ್ಥಳ ತನಿಖೆಯನ್ನು ಮಾಡಿ ವರದಿಯನ್ನು ನೀಡಿರುವುದಿಲ್ಲ. ನಿಡಿ-6 ನ್ನು ಯಾವ ಕಾರಣಕ್ಕಾಗಿ ನಾನು ಹಾಜರುಪಡಿಸಿರುತ್ತೇನೆ ಎಂದು ಹೇಳಲು ನನಗೆ ಆಗುವುದಿಲ್ಲ. ಸದರಿ ಆದೇಶದ ಮೇಲೆ ಎಲ್ಲೆಲ್ಲಿ ಅಪೀಲನ್ನು ಸಲ್ಲಿಸಲಾಗಿರುತ್ತದೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ.

ವಾದಿಯರು ಈ ದಾವೆಯಲ್ಲಿ ಸಲ್ಲಿಸಿರುವ ದಾಖಲೆಗಳನ್ನು ನನ್ನ ವಕೀಲರ ಮೂಲಕ ತೆಗೆಸಿ ಪರಿಶೀಲನೆ ಮಾಡಿರುವುದಿಲ್ಲ. ನಿಡಿ-6 ರ ಮೇಲಿನ ಹಿಂಬರಹದ ಮೇಲೆ ಇರುವ ಆದೇಶದ ಸಂಖ್ಯೆಃ139/1978-79, ದಿಃ31.07.1979 ರ ಆದೇಶದಂತೆ ರದ್ದುಪಡಿಸಲಾಗಿರುತ್ತದೆ ಎಂದರೆ ನಾನು ಪರಿಶೀಲಿಸಿರುವುದಿಲ್ಲ. ನಿಪಿ-9 ರಲ್ಲಿ ದಿಃ14.08.2007 ರಲ್ಲಿ ಆಗಿರುವ ಜಿಲ್ಲಾಧಿಕಾರಿಗಳ ಆದೇಶವನ್ನು ನಾನು ತಿಳಿದುಕೊಂಡಿರುವುದಿಲ್ಲ. ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅಪೀಲ್ ನಂ.1777/2001 ದಿನಾಂಕಃ01.07.2006 ರಂದು ಆದ ಆದೇಶದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಆದೇಶದಂತೆ ಹಿಂದಿನ 9 ಜನ ಮಂಜೂರುದಾರರಿಗೆ ಅವರ

ಸ್ವಾಧೀನಾನುಭೋಗ ಸರಿ ಇದೆ ಎಂದು ಹೇಳಿ ಅವರಿಗೆ ಆದ ಗ್ರ್ಯಾಂಟ್ ಅನ್ನು ರೆಗ್ಯೂಲರೈಸ್ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶ ಹಾಗೂ ಕೆ.ಎ.ಟಿ ಆದೇಶವನ್ನು ಪ್ರಶ್ನಿಸಿರುವುದಿಲ್ಲ.

ವಾದಿಯರು ಖರೀದಿಸಿದ ಜಮೀನಿನ ಮೇಲೆ ನಮಗೂ ಕೂಡಾ ಹಕ್ಕು ಇರುತ್ತದೆ. ಸದರಿ ಹಕ್ಕು ಇರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ನಾವು ಬಗರ್ ಹುಕುಂ ಗೆ ಅರ್ಜಿಯನ್ನು ನೀಡಿದ್ದನ್ನು ಹೊರತುಪಡಿಸಿ ಬೇರೆ ದಾಖಲೆ ಇರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯರಿಗೆ ಆಗಿರುವ ಕ್ರಯಪತ್ರವನ್ನು ಹಾಗೂ ಮ್ಯುಟೇಷನ್ ಅನ್ನು ನಾವು ಪ್ರಶ್ನಿಸಿರುವುದಿಲ್ಲ. ವಾದಿಯರ ಪರವಾಗಿ ಆಗಿರುವ ಶಾಶ್ವತ ನಿರ್ಭಂದಕಾಜ್ಞೆ ಆದೇಶವನ್ನು ನಾನು ಪ್ರಶ್ನಿಸಿರುವುದಿಲ್ಲ. ವಾದಿಯರಿಗೆ ತೊಂದರೆ ನೀಡಿದ್ದಾರೆ ಎಂದು ನೀಡಲಾದ ದೂರಿಗೆ ಸಂಬಂಧಪಟ್ಟ ನನ್ನನ್ನು ಠಾಣೆಗೆ ಕರೆಸಲಾಗಿರುತ್ತದೆ ಎಂದರೆ ಸರಿ. ಸದರಿ ಪೊಲೀಸ್ ಠಾಣೆಯಲ್ಲಿ ಪೊಲೀಸರು ಸದರಿ ಪ್ರಕರಣ ಸಿವಿಲ್ ವ್ಯಾಜ್ಯವಾಗಿರುವುದರಿಂದ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ತಿಳಿಸಿರುತ್ತಾರೆ ಎಂದರೆ ಸರಿ. ವಾದಿಯರು ಕ್ರಯಪತ್ರದಲ್ಲಿ ಕೊಂಡುಕೊಂಡ ದಾವಾ ಎ ಶೆಡ್ಯೂಲ್ ಆಸ್ತಿಯ ಮೇಲೆ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಸದರಿ ಒಂದು ಎಕರೆ 20 ಗುಂಟೆ ಆಸ್ತಿಯ ಪೈಕಿ 22 ಗುಂಟೆಯನ್ನು ನಾವು ಒತ್ತುವರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಹಿಂದೆ 1978-79 ನೇ ಇಸವಿಯಲ್ಲಿ ಕರಡಿಹಳ್ಳಿ ಕಾವಲು ಗ್ರಾಮದಲ್ಲಿ ಸರ್ವೆ ನಂ.1 ರಲ್ಲಿ ಯಾರು

ಯಾರಿಗೆ ಎಷ್ಟೆಷ್ಟು ಜಮೀನು ಮಂಜೂರಾಗಿರುತ್ತದೆ ಎಂದು ನನಗೆ ಗೊತ್ತಿರುತ್ತದೆ. ಸದರಿ ಇಸವಿಯಲ್ಲಿ ಸದರಿ ಸರ್ವೆ ನಂಬರ್ ನಲ್ಲಿ ರೇವಣ್ಣ, ಸೀನಣ್ಣ, ರಾಂಪುರದ ಮಣಿ, ಕುಮಾರಣ್ಣ ಮತ್ತು ಇತರರಿಗೆ ಮಂಜೂರಾಗಿರುತ್ತದೆ. ಅವರ ಹೆಸರನ್ನು ಹೇಳಲು ನನಗೆ ಆಗುವುದಿಲ್ಲ. ನಾನು ಹೇಳಿದ ಹೆಸರಿನ ಯಾವ ವ್ಯಕ್ತಿಗಳಿಗೂ ಸದರಿ ಸರ್ವೆ ನಂಬರ್ ನಲ್ಲಿ 1978-79 ರಲ್ಲಿ ಜಮೀನು ಮಂಜೂರಾಗಿರುವುದಿಲ್ಲ ಎಂದರೆ ಸರಿಯಲ್ಲ.

ಸದರಿ ಸರ್ವೆ ನಂಬರ್ ನಲ್ಲಿ 1952 ರಲ್ಲಿ ಡಿ.ಕೆ. ಶೇಷಾದ್ರಿ, ಡಿ.ಕೃಷ್ಣರಾವ್, ಡಿ.ಎಸ್.ನಂಜುಂಡಯ್ಯ, ಶ್ರೀಮತಿ ಸಾವಿತ್ರಮ್ಮ, ನಾಗರಾಜ್, ಸಾಲೋಮನ್, ಶೇಷಾಚಲನಾಯ್ಡು, ಶ್ರೀಮತಿ ಮೆಹರುನ್ನಿಸಾ ಮತ್ತು ಸಿ.ಜಿ.ನಾರಾಯಣಸ್ವಾಮಿರವರಿಗೆ ಮಾತ್ರ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ನನಗೆ ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಕೂಡಾ ವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ

ಓ.ಎಸ್.ನಂಃ 128/2022
ಡಿ.ಡಬ್ಲ್ಯೂಃ 1